ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಶ್ರೀರಂಗಪಟ್ಟಣ

ಸಿಸಿಃ ನಂಃ **1112/2021**

ಪಿ.ಡಬ್ಲ್ಯೂಃ **03**
ಸಿ.ಡಬ್ಲ್ಯೂಃ **02**

| | |
|---|---|
| ಸಾಕ್ಷಿಯ ಹೆಸರು | ವಿ.ಭುವನ್ ಪ್ರತಾಪ್ |
| ತಂದೆ/ಗಂಡನ ಹೆಸರು | ವೆಂಕಟೇಶ್ |
| ವಯಸ್ಸು | 33 ವರ್ಷ |
| ಉದ್ಯೋಗ | ಕೆ.ಇ.ಬಿ. ಕಂಟ್ರಾಕ್ಟರ್ |
| ವಿಳಾಸ | ಪಾಂಡವಪುರ ಟೌನ್ |

ಸಾಕ್ಷಿಗೆ ದಿನಾಂಕ **10.07.2025** ರಂದು ಪ್ರಮಾಣವಚನ ನೀಡಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ ಸ ಅ ರವರಿಂದಃ

ಚಾ ಸಾ **1** ರವರು ಗೊತ್ತು ಕೆ.ಇ.ಬಿ ಕಂಟ್ರಾಕ್ಟರ್. ಚಾ ಸಾ **3** ರವರು ಗೊತ್ತು.

ಸಾಕ್ಷಿಗೆ ನಿಪಿ **2** ನ್ನು ತೋರಿಸಲಾಗಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ **2** ಬಿ ಎಂದು ಗುರುತಿಸಲಾಯಿತು. **2021** ನೇ ಸಾಲಿನಲ್ಲಿ ಅಪಘಾತವಾಗಿರುವ ಬಗ್ಗೆ ಕಾರ್ ನ ವಿಮಾ ಮೊತ್ತ ಪಡೆದುಕೊಳ್ಳುವ ಉದ್ದೇಶದಿಂದ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ಅಪಘಾತ ಕೆ.ಎಸ್.ಆರ್.ಟಿ.ಸಿ ಬಸ್ ಮತ್ತು ಹೈ-**20** ಕಾರ್ ಗೆ ಅಪಘಾತವಾಗಿರುತ್ತದೆ. ನನಗೆ ಎರಡೂ ವಾಹನದ ನೋಂದಣಿ ಸಂಖ್ಯೆ ಗೊತ್ತಿರುವುದಿಲ್ಲ. ಸದರಿ ಮಹಜರ್ ಸ್ಥಳವನ್ನು ಚಾ ಸಾ **1** ರವರು ತೋರಿಸಿರುತ್ತಾರೆ. ಸ್ಥಳ ಮಹಜರ್ ಕಾಲದಲ್ಲಿ ಚಾ ಸಾ **1** ಮತ್ತು **4** ರವರು ಹಾಜರಿದ್ದರು. ಸದರಿ ಅಪಘಾತವು ಶ್ರೀರಂಗಪಟ್ಟಣದ ಬಸ್ ನಿಲ್ದಾಣದ ಹತ್ತಿರದ ಬಾರ್ ಮುಂಭಾಗದ ಹೈವೇಯಲ್ಲಿ ಸಂಭವಿಸಿರುತ್ತದೆ.

(ಸಾಕ್ಷಿಯನ್ನು ಮಾನ್ಯ ಸ ಸ ಅ ರವರ ಕೋರಿಕೆಯ ಮೇರೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು).

## ಪಾಟೀ ಸವಾಲು ಃ ಮಾನ್ಯ ಸ ಸ ಅ ರವರಿಂದ ಃ

ಅಪಘಾತವಾದ ಸ್ಥಳದಲ್ಲಿ ಪೋಲಿಸರು ನಿಪಿ 2 ರಂತೆ ಸ್ಥಳ ಮಹಜರ್ ಕ್ರಮ ಜರುಗಿಸಿ ನನ್ನ ಹಾಗೂ ಚಾ ಸಾ 1 ರವರ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

## ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ

ಚಾ ಸಾ 1, 3 ಮತ್ತು 4 ನನ್ನ ಸ್ನೇಹಿತರು. ಚಾ ಸಾ 1 ಮತ್ತು 3 ರವರು ಸ್ಥಳದಲ್ಲಿದ್ದ ಕಾರಣ ನಾನು ಸ್ಥಳಕ್ಕೆ ಹೋಗಿರುತ್ತೇನೆ. ಪೋಲಿಸರು ಮಹಜರ್ ಗೆ ಹಾಜರಾಗುವಂತೆ ನೋಟೀಸ್ ನೀಡಿ ಕರೆದಿರಲಿಲ್ಲ ಎಂದರೆ ಸರಿ. ಮಹಜರನ್ನು ಯಾರು ಬರೆದರು ಎಂಬ ಬಗ್ಗೆ ಅವರ ಹೆಸರು ತಿಳಿದಿರುವುದಿಲ್ಲ. ಬಸ್ ನ ನೋಂದಣಿ ಸಂಖ್ಯೆ ಕೆಎ-11-ಎಫ್-0414 ಆಗಿರುತ್ತದೆ. ಮೈ-ಬೆಂಗಳೂರು ರಸ್ತೆ ಹೆಚ್ಚು ವಾಹನದಟ್ಟನೆ ಇರುವ ಸ್ಥಳ ಎಂದರೆ ಸಾಕ್ಷಿ ಮಧ್ಯಮ ವಾಹನದಟ್ಟನೆ ಇರುತ್ತದೆ ಎಂದು ನುಡಿಯುತ್ತಾರೆ. ವಿನಾಯಕ ವೈನ್ ಸ್ಟೋರ್ ನ ಎಡಭಾಗಕ್ಕೆ ಬಸ್ ನಿಲ್ದಾಣ ಬರುತ್ತದೆ ಎಂದರೆ ಸರಿ. ಯಾವುದೇ ಬಸ್ ಗಳು ಮೈಸೂರಿನಿಂದ ಬಂದರೆ ಎಡಭಾಗದಲ್ಲಿ ತಿರುಗಿ ಒಳಗೆ ಹೋಗುತ್ತದೆ ಎಂದರೆ ಸರಿ. ನಾಯಕ ವೈನ್ ಸ್ಟೋರ್ ನ ಸ್ವಲ್ಪ ಮುಂಭಾಗದಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಸ್ವಲ್ಪ ಹಿಂದಕ್ಕಾದಂತೆ ಒಂದು ವೇಗನಿರೋದಕ ಹಂಪ್ ಅಳವಡಿಸಲಾಗಿರುತ್ತದೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಅಂಗಡಿ ಮುಗ್ಗಟ್ಟುಗಳು ಇವೆ ಎಂದರೆ ಸರಿ. ಅಕ್ಕ-ಪಕ್ಕದ ಅಂಗಡಿ ಮುಗ್ಗಟ್ಟಿನ ಮಾಲೀಕರುಗಳನ್ನು ಮಹಜರ್ ಗೆ ಕರೆದಿರುವುದಿಲ್ಲ. ನಾನು ಮಹಜರ್ ವೇಳೆ ಸ್ಥಳಕ್ಕೆ ಹೋಗಿರುವುದಿಲ್ಲ, ಮಹಜರ್ ನ್ನು ಠಾಣೆಯಲ್ಲಿ ಮಾಡಿದ್ದು, ನಾನು ನನ್ನ ಸ್ನೆಹಿತನಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ